<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ</u>

ಸಿ.ಸಿ ನಂಬರ್.706/2025

ಫಿರ್ಯಾದುದಾರರು ಃ- ರಾಜ್ಯ - ನ್ಯಾಮತಿ ಆರಕ್ಷಕ ಠಾಣೆ

ವಿರುದ್ಧ

ಆರೋಪಿಃ- ಶಿವರಾಜ್ ಎಂ ಬಿನ್ ಮಂಜಪ್ಪ ಜಿ,
42 ವರ್ಷ,
ವಾಸಃ ಸೊಮಿನಕೊಪ್ಪ ಗ್ರಾಮ,
ಶಿವಮೊಗ್ಗ ತಾಲ್ಲೂಕು.

## <u>ಆಪಾದನೆ</u>

ದಿನಾಂಕ 09-03-2025 ರಂದು ಬೆಳಗ್ಗೆ 5.45 ಗಂಟೆ ಸಮಯದಲ್ಲಿ ನ್ಯಾಮತಿ ಪೋಲೀಸ್ ಠಾಣಾ ವ್ಯಾಪ್ತಿಯ, ಆರೋಪಿ ಶಿವರಾಜ್ ಎಂ ಆದ ನೀವು ಕೆಎ-1-ಎಂಜಿ-0881 ನೊಂದಣಿ ಸಂಖ್ಯೆಯ ಟಯೋಟ ಫಾರ್ಚುನರ್ ಕಾರನ್ನು ಹೊನ್ನಾಳಿ ಕಡೆಯಿಂದ ಕುಂಕುವ ಗ್ರಾಮದ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವಂತೆ ಚಾಲನೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ .ನ್ಯಾ. ಸಂ. ಕಲಂ 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿ ಶಿವರಾಜ್ ಎಂ ಆದ ನೀವು ಕೆಎ-1-ಎಂಜಿ-0881 ನೊಂದಣಿ ಸಂಖ್ಯೆಯ ಟಯೋಟ ಫಾರ್ಚುನರ್ ಕಾರನ್ನು ಹೊನ್ನಾಳಿ ಕಡೆಯಿಂದ ಕುಂಕುವ ಗ್ರಾಮದ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವಂತೆ ಚಾಲನೆ ಮಾಡಿಕೊಂಡು ಬಂದಿದ್ದರಿಂದ ಕಾರಿನ ನಿಯಂತ್ರಣ ತಪ್ಪಿ ಕಾರು ಪಲ್ಟಿಹೊಡೆದ ರಭಸಕ್ಕೆ ಕಾರು ಶ್ರೀ ಚನ್ನಪ್ಪ ಸ್ವಾಮಿ ಮಠದ ಜಮೀನಿನಲ್ಲಿ ಹಾದು ಹೋಗಿರುವ ಎಫ್-5 ಗಡೇಕಟ್ಟೆ ಐಪಿ, ಹೆಚ್ ಟಿ ಮಾರ್ಗದ 63 ಕೆವಿ ಎ ಪರಿವರ್ತಕ ಕೇಂದ್ರಕ್ಕೆ ಮತ್ತು ಹೆಚ್ ಟಿ ಮಾರ್ಗ ಕಂಬಗಳಿಗೆ ಡಿಕ್ಕಿ ಹೊಡೆದಿದ್ದರಿಂದ ಟಿಸಿ ಹೊಡೆದು ಅದರಲ್ಲಿನ ಆಯಿಲ್ ಸಂಪೂರ್ಣ ನೆಲಕ್ಕೆ ಚೆಲ್ಲಿ , ಟಿಸಿ ಕಂಬಗಳು ಮುರಿದು, ಟಿಸಿ ಸ್ಟ್ರಕ್ಚರ್ ಸಂಪೂರ್ಣವಾಗಿ ಹಾಳಾಗಿ ಬೆಸ್ಕಾಂ ಇಲಾಖೆಗೆ ಒಟ್ಟು ರೂ.2,13,727/- ನಷ್ಟವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ .ನ್ಯಾ. ಸಂ. ಕಲಂ 324(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

## ಆರೋಪಿಯ ಹೇಳಿಕೆ.

ಪ್ರಶ್ನೆ 1 :- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರ :-

ಪ್ರಶ್ನೆ 2 **:-** ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರ :-

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.)

ಸ್ಥಳ ಃ- ಹೊನ್ನಾಳಿ
ದಿನಾಂಕಃ 03-03-2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹೊನ್ನಾಳಿ